ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4217
ಸದಸ್ಯರ ಹೆಸರು : ಶ್ರೀ ನಿಂಗಪ್ಪ ಹೆಚ್.
ವಿಷಯ : ಗ್ರಾಮಲೆಕ್ಕಿಗರ ಹುದ್ದೆ ಭರ್ತಿ
ಉತ್ತರಿಸುವ ದಿನಾಂಕ : 04.07.2005
ಉತ್ತರಿಸುವವರು : ಮಾನ್ಯ ಕಂದಾಯ ಸಚಿವರು

ಸಂಖ್ಯೆ	ಪ್ರಶ್ನೆ	ಉತ್ತರ
1	ತುಮಕೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು?	30
2	ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಆರ್ಥಿಕ ಮಿತವ್ಯಯ ಇರುವುದರಿಂದ ನೇರ ನೇಮಕಾತಿ ಮೂಲಕ ತುಂಬಲು ಬರುವುದಿಲ್ಲ. ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.
3	ಖಾಲಿ ಹುದ್ದೆಗಳನ್ನು ತುಂಬದಿರುವುದರಿಂದ ಜನರಿಗೆ ತೊಂದರೆ ಆಗುವುದನ್ನು ಪರಿಹರಿಸಲು ಸರ್ಕಾರ ಗಮನ ಹರಿಸುವುದು?	ಪಕ್ಕದ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯನ್ನು ಪ್ರಭಾರದಲ್ಲಿರಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಪ್ರಶ್ನೆ ಸಂಖ್ಯೆ: 326 (4217)

(ಉತ್ತರ ಲಗತ್ತಿಸಲಾಗಿದೆ)

ಶ್ರೀ ನಿಂಗಪ್ಪ ಹೆಚ್: ಮಾನ್ಯ ಉಪಾಧ್ಯಕ್ಷರೇ, ತುಮಕೂರು ಜಿಲ್ಲೆ ಒಂದರಲ್ಲೇ ಸುಮಾರು ಗ್ರಾಮ ಲೆಕ್ಕಿಗರ ಹುದ್ದೆ ಖಾಲಿ ಇದೆ ಎನ್ನುತಕ್ಕದ್ದು ಸರ್ಕಾರದವರು ಕೊಟ್ಟಿರತಕ್ಕಂಥ ಉತ್ತರ. ಜೊತೆಗೆ ಆರ್ಥಿಕ ಮಿತವ್ಯಯದಿಂದ ನಾವು ಇವತ್ತು ಖಾಲಿ ಹುದ್ದೆಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳಲು ಬರುವುದಿಲ್ಲ. ಅನುಕಂಪದ ಆಧಾರದ ಮೇಲೆ ನಾವು ನೇಮಕ ಮಾಡಿ ಕೊಳ್ಳುತ್ತೇವೆ ಎನ್ನತಕ್ಕದ್ದು, ಅವರು ನೀಡಿರತಕ್ಕಂಥ ಉತ್ತರ. ಆದರೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬೇಕಾದಂತಹ ಸಂದರ್ಭ ಯಾವಾಗ ಉದ್ಭವಿಸುತ್ತದೆ. ಎಂದರೆ ಸೇವೆಯಲ್ಲಿರತಕ್ಕವರು ಸತ್ತ ನಂತರ, ಅವರ ವಾರಸುದಾರರಿಗೆ ಈ ಹುದ್ದೆಯನ್ನು ಕೊಡತಕ್ಕಂತದ್ದು ಇದರಿಂದ ಖಾಲಿ ಹುದ್ದೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ತುಂಬತಕ್ಕದ್ದು ಸಾಧ್ಯವಾಗದೇ ಇರುವುದರಿಂದ ಈಗಾಗಲೇ ತುಮಕೂರು ಜಿಲ್ಲೆ ಒಂದರಲ್ಲೇ 30 ಹುದ್ದೆಗಳು ಖಾಲಿ ಇವೆ. ಇವತ್ತು ರಾಜ್ಯದಲ್ಲಿ ಇನ್ನೂ ಬೇಕಾದಷ್ಟು ಹುದ್ದೆಗಳು ಖಾಲಿ ಬಿದ್ದಿದ್ದಾವೆ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ತಕ್ಷಣ ಬೇಕಾಗಿರತಕ್ಕಂಥ ಅಧಿಕಾರಿ ಎಂದರೆ ಗ್ರಾಮ ಲೆಕ್ಕಿಗ. ಇವತ್ತು ವಿದ್ಯಾರ್ಥಿಗಳು ಶಾಲೆಗೆ ಸೇರ ಬೇಕಾದಾಗಲೇ ಅಥವಾ ಕಾಲೇಜಿಗೆ ಸೇರಬೇಕಾದರೂ ಕೂಡ ಅವರು ಒಂದು ವರಮಾನ ಸರ್ಟಿಫಿಕೇಟ್ ಅನ್ನು ಪಡೆಯಬೇಕಾದರೆ ಗ್ರಾಮ ಲೆಕ್ಕಿಗ ವರದಿ ಅವಶ್ಯಕವಾಗಿ ಬೇಕಾಗಿರುತ್ತದೆ.

ಶ್ರೀ ಹೆಚ್. ನಿಂಗಪ್ಪ (ಮುಂದು....) ಜೊತೆಗೆ, ಇವರು ಮೂರನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರ ಗಮನಿಸಿದರೆ, ಪಕ್ಕದ ವೃತ್ತದಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಪ್ರಭಾರದಲ್ಲಿರಿಸಿಕೊಳ್ಳುವ ಮೂಲಕ ಅವರಿಂದ ಕೆಲಸ ತೆಗೆದುಕೊಳ್ಳುತ್ತಿರುವಂಥಾದ್ದು ಈ ರೀತಿ ಪ್ರಭಾರದಲ್ಲಿರಿಸಿಕೊಂಡ ಅವರಿಂದ ಕೆಲಸ ತೆಗೆದುಕೊಳ್ಳುವ ಸಂದರ್ಭದಲ್ಲಿ ಗ್ರಾಮ ಲೆಕ್ಕಿಗರು ರೈತರಿಗೆ ಅಷ್ಟು ಸುಲಭವಾಗಿ ಸಿಗುವುದಿಲ್ಲ ಒಂದು ಪಂಚಾಯಿತಿಯ ವೃತ್ತದಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಕೇಳಿದರೆ ಈ ವೃತ್ತದಲ್ಲಿ ಕೆಲಸ ಮಾಡುತ್ತಿದ್ದಾರೆಂಬ ಉತ್ತರ ಬರುತ್ತದೆ. ಆದುದರಿಂದ ಇವೆಲ್ಲವನ್ನೂ ಸರಿಪಡಿಸಿಕೊಂಡು ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಗ್ರಾಮ ಲೆಕ್ಕಿಗರ ಸೇವೆ ಬಹಳ ಸುಲಭವಾಗಿ

ಸಿಗುವಂತಾಗಲು ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ಸರ್ಕಾರ ವಿಧಿಸಿರುವ "ಆರ್ಥಿಕ ಮಿತವ್ಯಯ"ದ ನಿರ್ಬಂಧ ತೆಗೆದುಹಾಕುವ ಮೂಲಕ ನೇಮಕ ಮಾಡಿಕೊಂಡು ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ಉಪಾಧ್ಯಕ್ಷರೇ, ಗೌರವಾನ್ವಿತ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆ. ಗ್ರಾಮ ಲೆಕ್ಕಿಗರ ಜವಾಬ್ದಾರಿ ಮತ್ತು ಕೆಲಸ-ಕಾರ್ಯಗಳ ಮಹತ್ವವನ್ನು ಸರ್ಕಾರ ಅಲ್ಲಗಳೆಯಲು ಸಾಧ್ಯವಿಲ್ಲ. ಅವರಿಗೆ ಬಹಳಷ್ಟು ಜವಾಬ್ದಾರಿಗಳಿದ್ದು, ರೈತರಿಗೆ ಅನುಕೂಲ ಕಲ್ಪಿಸಿಕೊಡುವ ಕೆಲಸವನ್ನು ಗ್ರಾಮ ಲೆಕ್ಕಿಗರು ಮಾಡುತ್ತಾರೆಂಬ ಮಾತನ್ನು ನಾವೆಲ್ಲರೂ ಒಪ್ಪುತ್ತೇವೆ. ಆದರೆ, ಸರ್ಕಾರದ ಇವೊತ್ತಿನ ಹಣಕಾಸಿನ ಇತಿ-ಮಿತಿ ಅರಿತು ಆರ್ಥಿಕ ಇಲಾಖೆ ವಿಧಿಸಿರುವ ನಿರ್ಬಂಧವನ್ನು ನಾವು ಒಪ್ಪಿಕೊಂಡಿದ್ದೇವೆ. ಹೀಗಾಗಿ, ಈ ತಕ್ಷಣವೇ ತುಮಕೂರು ಜಿಲ್ಲೆಯಲ್ಲಿ ಖಾಲಿ ಇರುವ 30 ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ತುಂಬುವುದಕ್ಕಾಗುವುದಿಲ್ಲ, ಆದರೆ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಒಂದು ಭರವಸೆ ನೀಡುವುದೇನೆಂದರೆ, ಖಾಲಿ ಇರುವ 30 ಗ್ರಾಮ ಲೆಕ್ಕಿಗರ ಹುದ್ದೆಗಳ ಪೈಕಿ 13 ಹುದ್ದೆಗಳನ್ನು ಸದ್ಯದಲ್ಲೇ ಭರ್ತಿ ಮಾಡಲಾಗುವುದು ಅಂದರೆ, ಇನ್ನು ಬಾಕಿ 17 ಹುದ್ದೆಗಳು ಖಾಲಿ ಉಳಿಯುತ್ತವೆ, ಹಾಗಾದಾಗ, ಪಕ್ಕದ ಗ್ರಾಮ ಲೆಕ್ಕಿಗರಿಗೆ ಇದರ ಜವಾಬ್ದಾರಿ ವಹಿಸಿಕೊಡುವ ಮುಖಾಂತರ ಸದ್ಯದ ಕಾರ್ಯ ನಿರ್ವಹಿಸುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ. ಹಾಗೂ ಮುಂದಿನ ದಿನಗಳಲ್ಲಿ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ಪರಿಶೀಲಿಸುತ್ತೇವೆ.

ಶ್ರೀ ಹೆಚ್. ನಿಂಗಪ್ಪ : ನನ್ನಲ್ಲಿರುವ ಮಾಹಿತಿ ಪ್ರಕಾರ ಕುಣಿಗಲ್ ತಾಲ್ಲೂಕು ಒಂದರಲ್ಲೇ ಸುಮಾರು 8 ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇವೆ. ಆದುದರಿಂದ, ತಾಲ್ಲೂಕಿನ ಜನರಿಗೆ ಗ್ರಾಮ ಲೆಕ್ಕಿಗರ ಅಭಾವದಿಂದ ಸಾಕಷ್ಟು ತೊಂದರೆಯುಂಟಾಗಿದೆ. ಖಾಲಿ ಇರುವ ಈ ಹುದ್ದೆಗಳನ್ನು ತುಂಬುವ ಕೆಲಸವನ್ನು ಮಾನ್ಯ ಸಚಿವರು, ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸರ್ಕಾರದ ಜಿಲ್ಲಾಧಿಕಾರಿಗಳು ಮತ್ತು ಸ್ಥರ್ಕಾರದ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ನೀಡಿರುವ ವರದಿಯ

ಆಧಾರದ ಮೇಲೆ ತುಮಕೂರು ಜಿಲ್ಲೆಯಲ್ಲಿ ಒಟ್ಟು 30 ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇರುವುದಾಗಿ ನನಗೆ ಖಚಿತವಾಗಿ ಮಾಹಿತಿ ಬಂದಿರುತ್ತದೆ. ಈ ಪೈಕಿ 13 ಹುದ್ದೆಗಳು ಅನುಕಂಪದ ಅಧಾರದ ಮೇಲೆ ನೇಮಕ ಮಾಡಿಕೊಳ್ಳುಬೇಕೆಂದು ಕೋರಿ ಅರ್ಜಿಗಳು ಬಂದಿದ್ದು ಅದರಂತೆ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಿದ್ದೇವೆ. ಒಟ್ಟು 30 ಖಾಲಿ ಹುದ್ದೆಗಳ ಪೈಕಿ 13 ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ನಾನು ನೀಡಿರುವ ಅಂಕಿ-ಅಂಶಗಳು ತಪ್ಪಾಗಿವೆಯೆಂದು ತಾವೇನು ಹೇಳುತ್ತಿದ್ದೀರಿ, ಆ ಕುರಿತಂತೆ ನಾನು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಸೂಚನೆ ಕೊಡುವ ಮೂಲಕ ಅಂಕಿ-ಅಂಶಗಳು ತಪ್ಪಿದ್ದಲ್ಲಿ ಸರಿಪಡಿಸುತ್ತೇವೆ.

ಶ್ರೀ ಹೆಚ್. ನಿಂಗಪ್ಪ: ತಪ್ಪಾಗಿದೆ ಎಂದು ನಾನು ಹೇಳಿಲ್ಲ ನನ್ನಲ್ಲಿರುವ ಮಾಹಿತಿ ಪ್ರಕಾರ ಕುಣಿಗಲ್ ತಾಲ್ಲೂಕು ಒಂದರಲ್ಲೇ ಎಂಟು ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಸದಸ್ಯರು ಈ ಪ್ರಶ್ನೆ ಪ್ರಸ್ತಾಪಿಸಿರುವುದರಿಂದ ಕುಣಿಗಲ್ ತಾಲ್ಲೂಕಿನಲ್ಲಿ ಎಂಟು ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇರಬಹುದು. ಸದರಿ ಹುದ್ದೆಗಳನ್ನು ಆದಷ್ಟು ಬೇಗ ತುಂಬುವುದಕ್ಕೆ ಆದ್ಯತೆ ನೀಡಬೇಕೆಂದು ನಾನು ಜಿಲ್ಲಾಧಿಕಾರಿಗಳಿಗೆ ಕಂದಾಯ ಇಲಾಖೆಯ ಕಾರ್ಯದರ್ಶಿಗಳ ಮೂಲಕ ಇವೊತ್ತು ಸೂಚನೆ ಕೊಡಿಸಲಾಗುವುದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಗ್ರಾಮ ಲೆಕ್ಕಿಗರ ಹುದ್ದೆ ಒಳಗೊಂಡಂತೆ ತಲಾಟಿ ತಳವಾರ ಹುದ್ದೆಗಳಿಗೆ ಸಂಬಂಧಿಸಿದಂತೆ ಹಾರನಹಳ್ಳಿ ರಾಮಸ್ವಾಮಿಯವರು ಸರ್ಕಾರಕ್ಕೆ ನೀಡಿರುವ ವರದಿಯನ್ನು ತಾವು ನೋಡಿದ್ದೀರೋ? ಇಲ್ಲವೋ? ಈ ಬಗ್ಗೆ ತಾವು ಇಲಾಖೆಯ ಕಾರ್ಯದರ್ಶಿಯವರಿಗೆ ಹೇಳಬೇಕು. ವರದಿಯಲ್ಲಿ, ಸದರಿ ಹುದ್ದೆಗಳು ತುಂಬುವ ಅಗತ್ಯವಿಲ್ಲವೆಂದೂ, ತುಂಬಿದರೆ ಇನ್ನೂ ಹೆಚ್ಚುವರಿಯಾಗಿ ಉಳಿಯುತ್ತದೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಪ್ರತಿ ಪಂಚಾಯಿತಿಗೂ ಒಬ್ಬ ಕಾರ್ಯದರ್ಶಿ ಮತ್ತು ಗ್ರಾಮ ಲೆಕ್ಕಿಗರನ್ನು ತುಂಬುವ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದಾರೆ. ಹೆಚ್ಚುವರಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಬರುವುದಿಲ್ಲ. ಆದುದರಿಂದ, ಕೂಡಲೇ ಹಾರನಹಳ್ಳಿ ರಾಮಸ್ವಾಮಿಯವರ ವರದಿಯನ್ನು ಜಾರಿಗೆ ಕೊಡುತ್ತೀರಾ? ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಆಡಳಿತ ಸುಧಾರಣೆ ಕುರಿತಂತೆ ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಸರ್ಕಾರಕ್ಕೆ ನೀಡಿರುವ ವರದಿ ಕುರಿತಂತೆ ವಿಸ್ತಾರವಾಗಿ ಒಂದು ದಿವಸ ಬೇಕಾದರೆ ವಿಧಾನಸಭೆಯಲ್ಲಿ ಚರ್ಚಿಸೋಣ. ವರದಿಯಲ್ಲಿ ಅವರು ನೀಡಿರುವ ಕೆಲವು ಸಲಹೆಗಳನ್ನು ಹಿಂದಿನ ಸರ್ಕಾರ ಈಗಾಗಲೇ ಕಾರ್ಯಗತಗೊಳಿಸಿದ್ದರೆ, ಈ ಸರ್ಕಾರವೂ ಕೆಲವೊಂದು ಕಾರ್ಯಗತಗೊಳಿಸಿರುವುದರ ಬಗ್ಗೆ ಈ ಸರ್ಕಾರದಲ್ಲಿ ಕೈಗಾರಿಕಾ ಸಚಿವನಾಗಿ ನಾನು ಪರಿಶೀಲಿಸಿದ್ದೇನೆ. ವರದಿಯಲ್ಲಿ ಅವರು ತಿಳಿಸಿರುವ ಎಲ್ಲಾ ಕ್ರಮಗಳೂ ಇಲಾಖೆಯ ದೃಷ್ಟಿಯಿಂದ ಸರಿಯೆಂದು ನನಗನಿಸುವುದಿಲ್ಲ. ಕೆಲವು ಭಿನ್ನಾಭಿಪ್ರಾಯಗಳಿವೆ. ಆದಕಾರಣ, ಈ ಕುರಿತಂತೆ ತಾವು ಮಾನ್ಯ ಅಧ್ಯಕ್ಷರಿಗೆ ಪತ್ರ ಬರೆಯುವ ಮೂಲಕ ಸದನದಲ್ಲಿ ಪ್ರಸ್ತಾಪ ಮಾಡಿ, ಆ ವಿಚಾರ ಬೇರೆ ಬೇರೆ ರೀತಿಯಲ್ಲೂ ಚರ್ಚೆಯಾಗಲಿ, ಆಗ ಬೇರೆ ಬೇರೆ ವಲಯಗಳಿಗೆ ಸಂಬಂಧಿಸಿದಂತೆ ಯಾವ್ಯಾವ ಇಲಾಖೆಗಳಲ್ಲಿ ಹುದ್ದೆಗಳನ್ನು ಕಡಿತಗೊಳಿಸ ಬಹುದು. ಯಾವ್ಯಾವ ಇಲಾಖೆಗಳಲ್ಲಿ ಕಡಿತಗೊಳಿಸುವುದಕ್ಕಾಗುವುದಿಲ್ಲವೆಂಬ ವಿಚಾರವನ್ನು ನಾವೆಲ್ಲರೂ ಚರ್ಚಿಸೋಣ.